(6

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 482 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಶಾಂತರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 19-07-2024 |
| ಉತ್ತರಿಸುವ ಸಚಿವರು | : | ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಳಗಾವಿ, ಧಾರವಾಡ ಉತ್ತರಕನ್ನಡ ಶಿವಮೊಗ್ಗ, ಚಿಕ್ಕಮಗಳೂರು ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ವಾಸಿಸುವ ಪಾರಂಪರಿಕ ಅರಣ್ಯ ವಾಸಿಗಳಾದ ಪ್ರವರ್ಗ-1ರಲ್ಲಿ ಬರುವ ಗೌಳಿ (ಧನಗರ ಗೌಳಿ) ಜನಾಂಗವು ಅನೇಕ ವರ್ಷಗಳಿಂದ ಅನಕ್ಷರಸ್ಥರಾಗಿರುವ ಕಾರಣ ಗೊಲ್ಲ, ಕಾಡುಗೊಲ್ಲ, ಕಚ್ಚೆಗೌಳಿ, ಧನಗರ, ಮುಂತಾದ ಅನೇಕ ಬೇರೆ ಬೇರೆ ಜಾತಿಗಳ ಹೆಸರಿನಲ್ಲಿ ಜಾತಿ ಪ್ರಮಾಣ ಪತ್ರಗಳು ಪಡೆಯುತ್ತಿದ್ದು ಇದನ್ನು ಬಗೆಹರಿಸಲು ಇರುವ ಮಾರ್ಗಗಳು ಯಾವುವು; (ಸಂಪೂರ್ಣ ವಿವರ ನೀಡುವುದು) | ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವ ಶಿಕ್ಷಣ ಮತ್ತು ಉದ್ಯೋಗದ ಮೀಸಲಾತಿಗಾಗಿ, ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000 ದಿನಾಂಕ: 30.03.2002ರಲ್ಲಿ ರಾಜ್ಯದಲ್ಲಿನ ಹಿಂದುಳಿದ ವರ್ಗಗಳನ್ನು ಪ್ರವರ್ಗ-I, ಪ್ರವರ್ಗ-II (ಎ), ಪ್ರವರ್ಗ-II(ಬಿ) ಪ್ರವರ್ಗ-III (ಎ) ಮತ್ತು ಪ್ರವರ್ಗ-III (ಬಿ) ಎಂದು ವರ್ಗೀಕರಿಸಲಾಗಿರುತ್ತದೆ.<br><br>ರಾಜ್ಯದಲ್ಲಿ ವಾಸಿಸುವ ಗೌಳಿ, ಗಾವ್.ಳಿ, ಗಾವಳಿ ಹಾಗೂ ಗಾವ್ಲಿ ಜಾತಿಗಳಿಗೆ ಹಿಂದುಳಿದ ವರ್ಗಗಳ ಪಟ್ಟಿಯ ಪ್ರವರ್ಗ-1ರ ಕ್ರಮಸಂಖ್ಯೆ:86 (ಹೆಚ್), 86 (ಐ), 86 (ಜೆ) ಹಾಗೂ 86 (ಕೆ) ರಲ್ಲಿ ಸೇರಿಸಲಾಗಿರುತ್ತದೆ. ಹೀಗಾಗಿ ಈ ಮೇಲ್ಕಾಣಿಸಿದ ಜಾತಿಯವರು ಸಂಬಂಧಿಸಿದ ಪ್ರಾಧಿಕಾರಗಳಿಂದ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಪಡೆಯಬಹುದಾಗಿರುತ್ತದೆ. |
| ಆ) | ಸದರಿ ಜಿಲ್ಲೆಗಳಲ್ಲಿ ಈ ಜನಾಂಗವು ಪ್ರವರ್ಗ-1 ರಲ್ಲಿ ಇದ್ದರೆ ಬೆಳಗಾವಿ ಜಿಲ್ಲೆಯಲ್ಲಿ ಮಾತ್ರ ಕೆಲವು ಹಳ್ಳಿಗಳ ಜನರಿಗೆ 2ಎ ನಲ್ಲಿ ಬರುವ ಧನಗರ ಎಂದು ಜಾತಿ ಪ್ರಮಾಣ ಪತ್ರ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಈ ಬಗ್ಗೆ ತೆಗೆದುಕೊಂಡ ಕ್ರಮವೇನು; (ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000 ದಿನಾಂಕ: 30.03.2002ರ ಆದೇಶದಲ್ಲಿ ಶೈಕ್ಷಣಿಕ ಮತ್ತು ಉದ್ಯೋಗದ ಮೀಸಲಾತಿಗಾಗಿ ಧನಗರ್ ಸಮುದಾಯವನ್ನು ಹಿಂದುಳಿದ ವರ್ಗಗಳ ಪಟ್ಟಿಯ ಪ್ರವರ್ಗ-2ಎ ರ ಕ್ರಮಸಂಖ್ಯೆ:7 (ಸಿ) ರಲ್ಲಿ ಸೇರಿಸಲಾಗಿರುತ್ತದೆ. ಹೀಗಾಗಿ ಧನಗರ್ ಜಾತಿಯವರು ಸಂಬಂಧಿಸಿದ ಪ್ರಾಧಿಕಾರಗಳಿಂದ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಪಡೆಯಬಹುದಾಗಿರುತ್ತದೆ. |
| ಇ) | ಗೌಳಿ ಸಮಾಜದ ಜಾತಿಯ ಬಗ್ಗೆ ಕುಲಶಾಸ್ತ್ರ, ಅಧ್ಯಯನ ಮಾಡಿ ಎಲ್ಲರನ್ನೂ ಒಂದೇ ಜಾತಿಯಡಿ ತರಲು ಅವಕಾಶವಿದೆಯೇ ಇದ್ದಲ್ಲಿ, ಇದಕ್ಕಿರುವ ಸರ್ಕಾರದ ಮಾನದಂಡಗಳೇನು? (ವಿವರ ನೀಡುವುದು) | ಗೌಳಿ ಸಮಾಜವನ್ನು ಈಗಾಗಲೇ ಪ್ರವರ್ಗ-1 ಕ್ರಮಸಂಖ್ಯೆ:86 (ಹೆಚ್) ನಲ್ಲಿ ಸೇರಿಸಲಾಗಿದ್ದು, ಶೈಕ್ಷಣಿಕ ಮತ್ತು ಉದ್ಯೋಗಕ್ಕೆ ಮೀಸಲಾತಿಯನ್ನು ನೀಡಲಾಗಿರುತ್ತದೆ. ಅದರಂತೆ, ಧನಗರ್ ಸಮುದಾಯವನ್ನು ಪ್ರವರ್ಗ-2ಎ ರ ಕ್ರಮಸಂಖ್ಯೆ:7 (ಸಿ) |

| | | |
|---|---|---|
| | | ರಲ್ಲಿ ಸೇರಿಸಲಾಗಿದ್ದು, ಶೈಕ್ಷಣಿಕ ಮತ್ತು ಉದ್ಯೋಗಕ್ಕೆ ಮೀಸಲಾತಿಯನ್ನು ನೀಡಲಾಗಿರುತ್ತದೆ. ಹೀಗಾಗಿ ಎರಡೂ ಸಮುದಾಯಗಳಿಗೆ ಮೀಸಲಾತಿ ಸೌಲಭ್ಯವನ್ನು ಈಗಾಗಲೇ ಕಲ್ಪಿಸಲಾಗಿದ್ದು, ಪ್ರತ್ಯೇಕವಾಗಿ ಕುಲಶಾಸ್ತ್ರ ಅಧ್ಯಯನದ ಅವಶ್ಯಕತೆ ಕಂಡುಬರುವುದಿಲ್ಲ. |

**ಸಂಖ್ಯೆ:ಹಿಂವಕ 195 ಬಿಸಿಎ 2024**

(ಶಿವರಾಜ ಎಸ್. ತಂಗಡಗಿ)
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರು